ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 159 ಪಬವ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:04.10.2017

## ಅಧಿಸೂಚನೆ

ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಾವಳಿಗಳು 1997ರಡಿರಯಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಒಟ್ಟು 26(22 ಮೂಲ ವೃಂದ ಮತ್ತು 4 ಹೈದ್ರಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದ) ಅಭ್ಯರ್ಥಿಗಳನ್ನು ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಯ ವೃಂದ–ಎ (ಕಿರಿಯ ಶ್ರೇಣಿ)ಯ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್) ಹುದ್ದೆಗಳಿಗೆ ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಅಧಿಸೂಚನೆ ಸಂಖ್ಯೆ:E(I)574/2017-18/PSC, ದಿನಾಂಕ:30.06.2017ರಲ್ಲಿ ಹೊರಡಿಸಿ, ದಿ:13.07.2017ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಿರುತ್ತದೆ.

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:30.06.2017ರಂದು ಪ್ರಕಟಿಸಿರುವ ಅಂತಿಮ ಆಯ್ಕೆ ಪಟ್ಟಿಯನ್ವಯ, ಆಯ್ಕೆಯಾಗಿರುವ ಒಟ್ಟು 26(22 ಮೂಲ ವೃಂದ ಮತ್ತು 4 ಹೈದ್ರಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದ) ಅಭ್ಯರ್ಥಿಗಳ ಪೈಕಿ, ಈ ಕೆಳಕಂಡ 22 ಅಭ್ಯರ್ಥಿಗಳಿಗೆ (18 ಮೂಲ ವೃಂದ ಮತ್ತು 4 ಹೈದ್ರಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದ)ವೇತನ ಶ್ರೇಣಿ ರೂ. 28100-50100ರ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಯ ವೃಂದ–ಎ (ಕಿರಿಯ ಶ್ರೇಣಿ)ಯ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್) ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ, ಹಾಗೂ ಮುಂದಿನ ಆದೇಶದವರೆಗೆ, ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರ್ಸ್) ನಿಯಮಾವಳಿಗಳು 1977ರ ನಿಯಮ 3 ರನ್ವಯ, 2 ವರ್ಷಗಳ ಪರಿವೀಕ್ಷಣೆಯ ಮೇಲೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ ನೇಮಕ ಮಾಡಲಾಗಿದೆ.

| ಕ್ರಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ (ಶ್ರೀ/ಶ್ರೀಮತಿ) | ಆಯ್ಕೆಯಾಗಿರುವ ಮೀಸಲಾತಿ/ವರ್ಗೀಕರಣ |
|---|---|---|
| 1. | ಸಮೀರ್ ಎಂ ಮುಲ್ಲಾ,<br>ಬಗ್ವಾನ್ ಚಾವ್ಲ<br>ಬೈಲಹೊಂಗಲ ಪೋಸ್ಟ, ಬೈಲಹೊಂಗಲ ತಾಲ್ಲೂಕು,<br>ಬೆಳಗಾವಿ ಜಿಲ್ಲೆ 591102 | ಸಾಮಾನ್ಯ/ ಪ್ರವರ್ಗ–2(ಬಿ) |
| 2. | ಎಂ.ಕಿಶೋರ್ ಕುಮಾರ್,<br>ನಂ.9, 1ನೇ ಕ್ರಾಸ್, 1ನೇ ಸ್ಟೇಜ್, ಇಂದಿರಾನಗರ,<br>ಬೆಂಗಳೂರು560038 | ಸಾಮಾನ್ಯ |
| 3. | ಪುನೀತ್ ಬಿ.ಆರ್ ಬಿನ್ ಬಿ.ವಿ.ರಂಗಪ್ಪ,<br>ನಂ.73, ಬಿಟ್ಟೇನಹಳ್ಳಿ ಶಾಲೆ ಹಿಂಭಾಗ, ಕನಕಕಟ್ಟೆ ಪೋಸ್ಟ್,<br>ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ–573144 | ಸಾಮಾನ್ಯ (ಪ್ರವರ್ಗ–1) |

| | | |
|---|---|---|
| 4. | ವಿಜಯಕುಮಾರ್.ಬಿ ಅಜುರ್, ಬಸವೇಶ್ವರ ನಿವಾಸ, ಹನುಮಾನ್ ಟೆಂಪಲ್ ಹತ್ತಿರ, ನೆಹರು ನಗರ, ಗ್ಯಾಂಗ್ ಬೌಡಿ, ವಿಜಯಪುರ ತಾಲ್ಲೂಕು ವಿಜಯಪುರ ಜಿಲ್ಲೆ–586101 | ಸಾಮಾನ್ಯ |
| 5. | ಮಾಡೋಲಪ್ಪ ಪಿ.ಎಸ್, ಪ್ರಭುಶೆಟ್ಟಿ ಸೋಮಣ್ಣ, ಶಿವಾನಿ ಪೋಸ್ಟ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ–585411 | ಸಾಮಾನ್ಯ/3ಬಿ/ಗ್ರಾಮೀಣ |
| 6 | ಜಯಲಕ್ಷ್ಮೀ.ಎನ್.ಆರ್, ನಂಜೇಗೌಡನಪಾಳ್ಯ, ಸಂತೇಮಾವತ್ತೂರು ಪೋಸ್ಟ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ–572130. | ಸಾಮಾನ್ಯ/3ಎ/ಮಹಿಳೆ |
| 7 | ಪವಿತ್ರ ಪಾಟೀಲ್, ಮಹಂತ್ ಸದನ್, 1ನೇ ಮಹಡಿ, 5ನೇ ಕ್ರಾಸ್, ಲಕ್ಷೀನಗರ, ಧಾರವಾಡ–580004 | ಸಾಮಾನ್ಯ/3ಬಿ/ಮಹಿಳೆ |
| 8 | ಶೃತಿ ಡಿ.ಸಿ, ಮಾತೃ ನಿಲಯ, 5ನೇ ಕ್ರಾಸ್, ನಾಗೇಶ್ವರ ಬಡಾವಣೆ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ–571301 | ಸಾಮಾನ್ಯ/3ಎ/ಮಹಿಳೆ |
| 9 | ಹಡಗಲಿ ಅರುಣ್ ಕುಮಾರ್, ಕೇರ್/ಆಫ್ ರೂಪ ಹೆಚ್, ನಂ..12, ಪೋಲೀಸ್ ಅಪೀಸರ್‍ಸ ಕ್ವಾರ್ಟರ್ಸ್, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಚಾಮರಾಜಪೇಟೆ, ಬೆಂಗಳೂರು ನಗರ–560018. | 3(ಬಿ)/ಗ್ರಾಮೀಣ |
| 10 | ಭೀಮಪ್ಪ ಲಾಲಿ, ಹಾರುಗೇರಿ ಕ್ರಾಸ್ ಹತ್ತಿರ, ಹಾರುಗೇರಿ ಪೋಸ್ಟ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ–591220 | ಪ್ರವರ್ಗ 2(ಎ) |
| 11 | ನಂದಿನಿ ಆರ್.ಬಿ ಕೋ ಸುಬ್ರಹ್ಮಣ್ಯ, ಗೆಡರೆ ಗ್ರಾಮ & ಪೋಸ್ಟ್, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ–561213 | 2(ಎ)/ಮಹಿಳೆ |
| 12 | ಪ್ರಕಾಶ ವಡ್ಡರ್ ಪ್ರಕಾಶ್ ಡಿ ವಡ್ಡರ್ ಅರತಾಳ ಪೋಸ್ಟ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ–591248 | ಪ.ಜಾ/ಗ್ರಾಮೀಣ |
| 13 | ಬಾಬು ಎಂ. ಬಿನ್ ಮುನಿವೆಂಕಟಪ್ಪ, ಮುದುವಾಡಿ ಗ್ರಾಮ & ಪೋಸ್ಟ್, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ–563126 | ಪ.ಜಾ |
| 14 | ಶಿವಕುಮಾರ್ ಬಿ ಕಗ್ಗಲಹಳ್ಳಿ ಗ್ರಾಮ, ಬೂದಿಗೆರೆ ಪೋಸ್ಟ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562129 | 3(ಎ)/ಗ್ರಾಮೀಣ |
| 15 | ಲಕ್ಷ್ಮೀ ಪಿ, ನಂ–80/1 ಮಹದೇಶ್ವರ ಬ್ಲಾಕ್, ಸೋಮವಾರಪೇಟೆ, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ–571235 | ಪ.ಜಾ/ಮಹಿಳೆ |

| | | |
|---|---|---|
| 16 | ಆತಿಕ್ ಪಾಷಾ<br>ಮೈಲಾಪುರ ಗ್ರಾಮ, ಮಾರಂಡಹಳ್ಳಿ ಪೋಸ್ಟ್, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ-563131 | 2(ಬಿ)/ಗ್ರಾಮೀಣ |
| 17 | ಬಸವರಾಜ ಹೆಗ್ಗನಾಯಕ,<br>ಚಿಕ್ಕಲದಿನ್ನಿ ಗ್ರಾಮ, ಇಸ್ಲಂಪುರ ಪೋಸ್ಟ್, ಹುಕ್ಕೇರಿ ತಾಲ್ಲೂಕು, ಬೆಳಾಗವಿ ಜಿಲ್ಲೆ-591243 | ಪ.ಪಂ/ಗ್ರಾಮೀಣ |
| 18 | ಹರ್ಷ ಕೆ.ಬಿ,<br>ನಂ. 1870 / 75, 7ನೇ ಮುಖ್ಯರಸ್ತೆ, 4ನೇ ಕ್ರಾಸ್, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ-577004 | ಸಾಮಾನ್ಯ/<br>ಮಾಜಿ ಸೈನಿಕ |

ಹೈದ್ರಬಾದ್ ಕರ್ನಾಟಕ (ಸ್ಥಳಿಯ ವೃಂದ)

| ಕ್ರ.ಸಂ | ಅಭ್ಯರ್ಥಿಯ ಹೆಸರು<br>ಮತ್ತು ವಿಳಾಸ<br>(ಶ್ರೀ/ಶ್ರೀಮತಿ) | ಆಯ್ಕೆಯಾಗಿರುವ<br>ಮೀಸಲಾತಿ/ವರ್ಗೀಕರಣ |
|---|---|---|
| 1 | ನಾಗರಾಜ,<br>ವಿಜಯನಗರ ಕಾಲೋನಿ, ಸಿರವಾರ ಪೋಸ್ಟ್, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ-584129 | ಸಾಮಾನ್ಯ/2(ಎ) |
| 2 | ಅನಿತ<br>ನಂ.73, ಕನಕ ನಿಲಯ, ಶ್ರೀಹರಿ ನಗರ, ಹಳೇ ಜೀವರ್ಗಿ ರಸ್ತೆ, ಕಲಬುರ್ಗಿ ಜಿಲ್ಲೆ-585102 | ಸಾಮಾನ್ಯ/2(ಎ)<br>/ಮಹಿಳೆ |
| 3 | ಶಶಿಕಾಂತ,<br>ನಂ-8/11, ಮರಗೆಮ್ಮ ಟೆಂಪಲ್ ಹತ್ತಿರ, ಉಪ್ಪಾರ ಗಲ್ಲಿ, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ-585330. | ಪ.ಜಾ |
| 4 | ಬಾಳಪ್ಪನವರ ಆನಂದ ಕುಮಾರ ಬಿ, ಬಿನ್ ಕಲ್ಲೆಪ್ಪ,<br>ನಂ.142, ಹೆಚ್/5, ವಿಜಯನಗರ ಎಕ್ಸಟನ್ಸನ್,<br>ಹೂವಿನಹಡಗಲಿ ಪೋಸ್ಟ್, ಹೂವಿನಹಡಗಲಿ ತಾಲ್ಲೂಕು,<br>ಬಳ್ಳಾರಿ ಜಿಲ್ಲೆ-583219. | ಪ.ಪಂ |

:: ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು::

1. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ 1977ರ ನಿಯಮ 18 ರನ್ವಯ, ಈ ನೇಮಕಾತಿ ಆದೇಶದ ದಿನಾಂಕದಿಂದ 15 ದಿನಗೊಳಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಲ್ಲಿ ತಪ್ಪದೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು, ನಿಗಧಿತ ದಿನಾಂಕದೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ, ಅದೇ ನಿಯಮಾವಳಿಗಳ ನಿಯಮ 18(3) ರನ್ವಯ ನೇಮಕಾತಿಗೆ ಅನರ್ಹರಾಗುತ್ತಾರೆ.

2. ಈ ಅಭ್ಯರ್ಥಿಗಳ ನೇಮಕಾತಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ ಸಂಖ್ಯೆ:202671-673/2015 ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿನ

ಅರ್ಜಿ ಸಂಖ್ಯೆ:5553-56/2015, 2351/2017 ಮತ್ತು 2819/2017 ಹಾಗೂ ಈ ಆಯ್ಕೆ ಬಗ್ಗೆ ಇತರೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಬಾಕಿಯಿದ್ದಲ್ಲಿ, ಈ ಆಯ್ಕೆಯ ಬಗ್ಗೆ ನ್ಯಾಯಾಲಯಗಳು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ನೇಮಕಾತಿಯನ್ನು ಪರಿಷ್ಕರಿಸಲಾಗುವುದು.

3. ಸದರಿ ನೇಮಕಾತಿಯು ತಾತ್ಕಾಲಿಕವಾಗಿದ್ದು, ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಾವಳಿಗಳು 1977 ರ ನಿಯಮ 3 ರನ್ವಯ 2 ವರ್ಷಗಳ ಖಾಯಂ ಪೂರ್ವ ಪರೀಕ್ಷಾರ್ಥ ಸೇವಾ ಅವಧಿಗೆ ಒಳಪಟ್ಟಿರುತ್ತದೆ. ಖಾಯಂ ಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು.

4. ಸದರಿ ಅಭ್ಯರ್ಥಿಗಳ ನೇಮಕಾತಿಯು ಮತ್ತು ಸೇವಾ ಸೌಲಭ್ಯಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರದ ನಿಯಮಗಳು/ಆದೇಶಗಳ ಅಧೀನಕ್ಕೊಳಪಟ್ಟಿರುತ್ತದೆ.

5. ಕರ್ನಾಟಕ ನಾಗರೀಕ ಸೇವಾ (ಕನ್ನಡ ಭಾಷಾ ಪರೀಕ್ಷೆ) 1974 ರನ್ವಯ, ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್) ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಹಾಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಪಾಸು ಮಾಡತಕ್ಕದ್ದು.

6. ನೇಮಕಾತಿ ಮಾಡಿದ ಸ್ಥಳಕ್ಕೆ ಪ್ರಯಾಣಿಸಲು ಯಾವುದೇ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ನೀಡಲಾಗುವುದಿಲ್ಲ.

7. ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ, ಮೂಲ ಜಾತಿ ಪ್ರಮಾಣ ಪತ್ರ, ವಾರ್ಷಿಕ ವರಮಾನ ಪ್ರಮಾಣ ಪತ್ರ, ಶೈಕ್ಷಣಿಕ ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರಗಳು, ಗ್ರಾಮೀಣ ಪ್ರದೇಶಕ್ಕೆ ಸೇರಿದ ಪ್ರಮಾಣ ಪತ್ರಗಳು ಹಾಗೂ ಅಭ್ಯರ್ಥಿಯ ಕುಟುಂಬಕ್ಕೆ ಸಂಬಂಧಿಸಿದಂತೆ ಸ್ಥಿರ ಮತ್ತು ಚರಾಸ್ತಿಗಳ ವಿವರ, ಸ್ವಗ್ರಾಮದ ಬಗ್ಗೆ ಮಾಹಿತಿ/ದಾಖಲಾತಿ ಹಾಗೂ ಇತರೆ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.

8. ಅಭ್ಯರ್ಥಿಯು ಸಲ್ಲಿಸುವ ಮೂಲ ದಾಖಲಾತಿ/ಪ್ರಮಾಣ ಪತ್ರಗಳಲ್ಲಿನ ಮಾಹಿತಿ ತಪ್ಪು ಅಥವಾ ಸುಳ್ಳು ಎಂದು ಕಂಡು ಬಂದಲ್ಲಿ ಅಂತಹವರ ನೇಮಕಾತಿ/ಆಯ್ಕೆಯನ್ನು ಕರ್ನಾಟಕ ಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರ ನಿಯಮ 15ರನ್ವಯ ತಕ್ಷಣದಿಂದಲೇ ಅಂತಹವರನ್ನು ಸೇವೆಯಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಅಂತಹ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯನ್ವಯ ಕ್ರಮಕೈಗೊಳ್ಳಲಾಗುವುದು.

9. ಈ ನೇಮಕಾತಿಯು ಅಭ್ಯರ್ಥಿಗಳ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ಹಾಗೂ ಪದವಿಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಪದವಿ ಪ್ರಮಾಣ ಪತ್ರ ಹಾಗೂ ಎಸ್.ಎಸ್.ಎಲ್.ಸಿ/ತತ್ಸಮಾನ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ ದೃಢೀಕರಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

10. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರಲ್ಲಿನ ನಿಯಮ 28ರ ರೀತ್ಯಾ ಬಹುಪತ್ನಿತ್ವ/ಪತಿತ್ವ ಹೊಂದಿಲ್ಲದಿರುವ ಬಗ್ಗೆ ಸ್ವಯಂ ಘೋಷಣೆ ಮಾಡಿ, ಈ ಬಗ್ಗೆ ಪ್ರಮಾಣ ಪತ್ರವನ್ನು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಸಲ್ಲಿಸತಕ್ಕದ್ದು.

11. ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆ ಭಾವ ಚಿತ್ರಗಳು ಮತ್ತು ವಿವಾಹಿತರಾಗಿದ್ದಲ್ಲಿ ಪತಿ-ಪತ್ನಿಯ ಜಂಟಿ ಭಾವ ಚಿತ್ರವನ್ನು (ಸ್ಟುಡಿಯೋದಲ್ಲಿ ತೆಗೆಸಿರುವ) ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.

12. ಅಭ್ಯರ್ಥಿಯು ಸೇವೆಗೆ ಹಾಜರಾಗಿ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣ ವಚನ/ಸೇವಾ ಪ್ರತಿಜ್ಞಾ ವಿಧಿ ಸ್ವೀಕರಿಸುವುದು".

13. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ವಿಶೇಷ) 04 ಪಿಇಟಿ 2005 ದಿನಾಂಕ: 31.03.2006 ರನ್ವಯ, ಅಭ್ಯರ್ಥಿಯು ಹೊಸ ನಿವೃತ್ತಿ ವೇತನ ಯೋಜನೆಗೆ (ಎನ್.ಪಿ.ಎಸ್) ಒಳಪಟ್ಟಿರುತ್ತಾರೆ.

14. ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿಸಲ್ಲಿಸಿದ ಬಗ್ಗೆ, ಇಲಾಖಾಧಿಕಾರಿಗಳು ನೀಡಿರುವ ನಿರಾಕ್ಷೇಪಣಾ ಪತ್ರ, ಯಾವುದೇ ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದ್ದಮೆ ಬಾಕಿಯಿಲ್ಲದಿರುವ/ಹೂಡಲು ಉದ್ದೇಶಿಸದಿರುವ ಬಗ್ಗೆ ಮತ್ತು ಇಲಾಖೆಯಿಂದ ಬಿಡುಗಡೆಯಾಗಿರುವ ಬಗ್ಗೆ, ನಿಯಮಾವಳಿಗಳನ್ನು ಉಲ್ಲಂಘಿಸಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

15. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿಗಳು 1957ರ ನಿಯಮ 5(1)(ಎ) ರನ್ವಯ ಅಭ್ಯರ್ಥಿಗಳ ಜೇಷ್ಠತೆಯನ್ನು ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಅಂತಿಮ ಆಯ್ಕೆಪಟ್ಟಿಯ ಕ್ರಮಾಂಕದ ಆಧಾರದ ಮೇಲೆ ಪರಿಗಣಿಸಲಾಗುವುದು.

16. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಆಯೋಜಿಸುವ ತರಬೇತಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು ಹಾಗೂ ಅಭ್ಯರ್ಥಿಗಳು ಪಡೆದ ತರಬೇತಿಯ ಮಾಸಿಕ ವರದಿಯನ್ನು ಇಲಾಖೆಗೆ ಸಲ್ಲಿಸುವುದು. ತರಬೇತಿಗೆ ಗೈರು ಹಾಜರಾದಲ್ಲಿ ಅಶಿಸ್ತು ಎಂದು ಪರಿಗಣಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

17. ಈ ಅಭ್ಯರ್ಥಿಗಳು ಸಲ್ಲಿಸಿರುವ ವಿದ್ಯಾರ್ಹತೆ / ಜನ್ಮ ದಿನಾಂಕಗಳ ಮೂಲ ಪ್ರಮಾಣ ಪತ್ರಗಳು ಸರಿ ಇವೆ ಎಂದು ಅಭ್ಯರ್ಥಿಗಳಿಂದ ಶಪಥಪತ್ರ (Affidavit) ಕರ್ತವ್ಯಕ್ಕೆ ಹಾಜರಾಗುವಾಗ ನಿಗಧಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

18. ಆಯ್ಕೆಯಾಗಿರುವ ಒಟ್ಟು 26 ಅಭ್ಯರ್ಥಿಗಳ ಪೈಕಿ, ಶ್ರೀ ಖರಿಂ ಅಸದಿ, ಶ್ರೀ ವಿವೇಕಾನಂದ ಹೂವಿನಹಳ್ಳಿ, ಶ್ರೀ ಹಾಲಸಿದ್ದಪ್ಪ ಪೂಜೇರಿ ಮತ್ತು ಶ್ರೀ ಮಲ್ಲಪ್ಪ ತೊಡಲಬಾಗಿ ಇವರುಗಳಿಗೆ ಸಂಬಂಧಿಸಿದಂತೆ ಕೆಲವೊಂದು ದಾಖಲಾತಿಗಳ ಪರಿಶೀಲನೆ ಪೂರ್ಣವಾಗಿಲ್ಲದ ಕಾರಣ ಸದರಿ ದಾಖಲಾತಿಗಳ ಪರಿಶೀಲನಾ ದೃಢೀಕರಣಗಳು ಸ್ವೀಕೃತವಾದ ನಂತರ ಇವರುಗಳ ಸಂಬಂಧ ನೇಮಕಾತಿ ಆದೇಶವನ್ನು ಹೊರಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಹಾಗೂ

ಸದರಿಯವರುಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೊಂದಿರುವ ಜೇಷ್ಠತೆಯನ್ನು ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ(ಪಂಚಾಯತ್ ರಾಜ್) ವೃಂದದ ಸೇವಾ ಜೇಷ್ಠತೆಯಲ್ಲಿ ಕಾಪಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

4/10/2017

(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾ ಇಲಾಖೆ

ಇವರಿಗೆ;

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

<u>ಪ್ರತಿ:</u>

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/ (ಇ&ಆರ್‌ಎಸ್‌ಎ)/(ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001
2. ಸಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಹಾನಿರ್ದೇಶಕರು, ಆಢಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
4. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಪಾರ್ಕ್‌ಹೌಸ್, ಬೆಂಗಳೂರು-01
5. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮುಖ್ಯಸ್ಥರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ, ಲಲಿತ್‌ಮಹಲ್ ರಸ್ತೆ, ಮೈಸೂರು. ಮೈಸೂರು ಜಿಲ್ಲೆ.
7. ಸರ್ಕಾರದ ವಿಶೇಷ ಕಾರ್ಯದರ್ಶಿ(ಸೇವಾ ನಿಯಮಗಳು) ಸಿಆಸು ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು) ಸಿಆಸು ಇಲಾಖೆ, ವಿಧಾನಸೌಧ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ ಪೋಡಿಯಂ ಬ್ಲಾಕ್ ಬೆಂಗಳೂರು.
10. ನಿರ್ದೇಶಕರು, ಕರ್ನಾಟಕ ಸರ್ಕಾರ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಗೋಪುರ ಪೋಡಿಯಂ ಬ್ಲಾಕ್ ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, (ಕೆ.ಪಿ.ಎಸ್.ಸಿ ಶಾಖೆ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
12. ರಾಜ್ಯ ಹುಜೂರ್ ಖಜಾನೆ.
13. ಸಂಬಂಧಿಸಿದ ಅಭ್ಯರ್ಥಿಗಳಿಗೆ (ನೊಂದಾಯಿತ ಅಂಚೆ ಸ್ವೀಕೃತಿ ಬಾಕಿಯೊಂದಿಗೆ)
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ;

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.